# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (54) 109 |
| ಸದಸ್ಯರ ಹೆಸರು | : | ಶ್ರೀ ಎಸ್.ವ್ಹಿ.ಸಂಕನೂರ<br>(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 08.12.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2025ರ ಸಾಲಿನಲ್ಲಿ ಪಿ.ಯು.ಸಿ ದ್ವಿತೀಯ ವಾರ್ಷಿಕ ಪರೀಕ್ಷೆಗೆ 1, 2, ಹಾಗೂ 3ಕ್ಕೆ ಸಂಬಂಧಿಸಿದಂತೆ ಸ್ಕ್ವಾಡ್ ಡ್ಯೂಟಿ, ಮುಖ್ಯ ಪರೀಕ್ಷಕ/ಜಂಟಿ ಮುಖ್ಯ ಪರೀಕ್ಷಕರಾಗಿ ಹಾಗೂ ಕೊಠಡಿ ಸೂಪರ್‌ವೈಸರ್ ಆಗಿ ಕಾರ್ಯನಿರ್ವಹಣೆ ಮಾಡಿದ ಸಿಬ್ಬಂದಿಗೆ ಸಂಭಾವನೆ ವಿತರಿಸಲಾಗಿಲ್ಲ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ ಕೂಡ ವಿತರಣೆ ಮಾಡಿಲ್ಲದಿರುವುದು ನಿಜವೇ; | ಒಂದನೇ ಕಂತಿನಲ್ಲಿ ಪದವಿ ಪೂರ್ವ ವೆಚ್ಚಕ್ಕಾಗಿ ಲೆಕ್ಕ ಶೀರ್ಷಿಕೆ:2202~02~001~0~07~015(ಪೂರಕ ವೆಚ್ಚ) ರಡಿ ರೂ.2880.00 ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ:2202~02~001~0~07~041 (ಪ್ರಯಾಣ ವೆಚ್ಚ) ರಡಿ ರೂ.2480.00 ಲಕ್ಷಗಳು ಬಿಡುಗಡೆಯಾಗಿದ್ದು, ಸದರಿ ಅನುದಾನವನ್ನು ಆಧ್ಯತೆ ಮೇರೆಗೆ ಪರೀಕ್ಷೆ 1, 2, ಹಾಗೂ 3ರ ಮೌಲ್ಯಮಾಪನ ಕಾರ್ಯನಿರ್ವಹಿಸಿದ ಒಟ್ಟು 39,095 ಮೌಲ್ಯಮಾಪಕರುಗಳಿಗೆ ಒಟ್ಟು ರೂ.4874.67 ಲಕ್ಷಗಳ ಸಂಭಾವನೆ ಹಾಗೂ ಟಿಎ/ಡಿಎ ವೆಚ್ಚ ಭರಿಸಲಾಗಿರುತ್ತದೆ.<br><br>ಪ್ರಸ್ತುತ ಎರಡನೇ ಕಂತಿನಲ್ಲಿ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನದಲ್ಲಿ ಪರೀಕ್ಷೆ 1 ರಲ್ಲಿ ಸ್ಕ್ವಾಡ್ ಡ್ಯೂಟಿ ಕಾರ್ಯನಿರ್ವಹಣೆ ಮಾಡಿದ 3,389 ಸಿಬ್ಬಂದಿಗಳಿಗೆ ರೂ.5,29,78,975/-ಗಳ ಕೆ2 ಬಿಲ್ಲನ್ನು ಸಿದ್ಧಪಡಿಸಿ ಪಾವತಿಗಾಗಿ ಖಜಾನೆಗೆ ಸಲ್ಲಿಸಲಾಗಿದೆ ಹಾಗೂ ಪರೀಕ್ಷೆ 2 & 3ರಲ್ಲಿ ಸ್ಕ್ವಾಡ್ ಡ್ಯೂಟಿ ಕಾರ್ಯನಿರ್ವಹಣೆ ಮಾಡಿದ ಸಿಬ್ಬಂದಿಗಳಿಗೆ ಸಂಭಾವನೆ ಪಾವತಿಸಲು ಕ್ರಮವಹಿಸಲಾಗುತ್ತಿದೆ.<br><br>ಪರೀಕ್ಷೆ 1, 2 & 3ರ ಮುಖ್ಯ ಪರೀಕ್ಷಕ/ಜಂಟಿ ಮುಖ್ಯ ಪರೀಕ್ಷಕರಾಗಿ ಹಾಗೂ ಕೊಠಡಿ ಸೂಪರ್‌ವೈಸರ್‌ಗಳ ಸಂಭಾವನೆ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ ಮತ್ತು ಇತರೆ ಚಟುವಟಿಕೆಗಳಿಗಾಗಿ ರೂ.2252.87 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಯ ಸಹಮತಿಗಾಗಿ ಸಲ್ಲಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಎಷ್ಟು ಕಾಲಾವಧಿಯಲ್ಲಿ ಸಂಭಾವನೆ ವಿತರಿಸಲಾಗುವುದು? (ಮಾಹಿತಿ ನೀಡುವುದು) | ಆರ್ಥಿಕ ಇಲಾಖೆಯ ಸಹಮತಿಯ ನಂತರ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದು. |

**ಇಪಿ 230 ಯೋಯೋಕ 2025**

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು